

## ಅಪರಾಧಗಳ ತಡೆಗೆ ಜಾಗತಿಕ ಮಟ್ಟದ ತಂತ್ರಗಳು

ಸೈಬರ್ ದಾಳಿಗಳು ಒಬ್ಬ ವ್ಯಕ್ತಿಯಿಂದ ಆರಂಭಗೊಂಡು ಈಗ ಅದೊಂದು ದೊಡ್ಡ ಜಾಲವಾಗಿ ಬೆಳೆದುನಿಂತಿದೆ. ಇದನ್ನು ಭೇದಿಸಲು ಜಗತ್ತಿನ ಬಹಳಷ್ಟು ಕಂಪನಿಗಳು, ಸಂಸ್ಥೆಗಳು, ವಿಶ್ವವಿದ್ಯಾಲಯಗಳು ನಿರಂತರ ಪ್ರಯತ್ನ ನಡೆಸುತ್ತಲೇ ಹೊಸ ತಂತ್ರಗಾರಿಕೆಯನ್ನೂ ಅನ್ವೇಷಿಸುತ್ತಿದ್ದಾರೆ. ಅಮೆರಿಕ, ಐರೋಪ್ಯ ರಾಷ್ಟ್ರಗಳು, ರಷ್ಯಾ ಹಾಗೂ ಜಪಾನ್ ದೇಶಗಳು ಕಾಲಕಾಲಕ್ಕೆ ತಮ್ಮ ತಂತ್ರಜ್ಞಾನವನ್ನು ಉನ್ನತೀಕರಿಸಿಕೊಳ್ಳುತ್ತಿವೆ. ಸೈಬರ್ ಅಪರಾಧ ನಿಯಂತ್ರಣ ಕೇಂದ್ರಗಳು, ಡಿಜಿಟಲ್ ವಿಧಿವಿಜ್ಞಾನ ಪ್ರಯೋಗಾಲಯಗಳು, ದಾಳಿಯನ್ನು ಮುಂಚೆಯೇ ತಿಳಿಯುವ ಕೇಂದ್ರಗಳ ಸ್ಥಾಪನೆ ಮಾಡುತ್ತಲಿವೆ. ಇವುಗಳಿಗೆ ಕೃತಕ ಬುದ್ಧಿಮತ್ತೆ, ಮಷಿನ್ ಲರ್ನಿಂಗ್, ಕ್ಲೌಡ್ ಹಾಗೂ ಬಿಗ್ ಡಾಟಾ ಇತ್ಯಾದಿ ಕ್ಷೇತ್ರಗಳಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿ ನಡೆಸುತ್ತಿವೆ.

ರೊಮಾನಿಯಾದಲ್ಲಿ 2015ರಿಂದ ಬಂದಿರುವ ಹೊಸ ನಿಯಮದ ಅನ್ವಯ ಕಾಲಕಾಲಕ್ಕೆ ಪೊಲೀಸ್ ಅಧಿಕಾರಿಗಳು, ವಕೀಲರು ಹಾಗೂ ನ್ಯಾಯಾಧೀಶರಿಗೆ ತರಬೇತಿ ನೀಡಲಾಗುತ್ತಿದೆ. ಸಿಂಗಾಪುರದಲ್ಲಿರುವ ಇಂಟರ್‌ಪೋಲ್‌ನ ಅನ್ವೇಷಣೆಗಳ ಜಾಗತಿಕ ಸಂಕೀರ್ಣದಲ್ಲಿ ಸೈಬರ್ ಫ್ಯೂಷನ್ ಸೆಂಟರ್ ತೆರೆದಿದೆ. ಇದರಲ್ಲಿ ಜಾಗತಿ ಮಟ್ಟದಲ್ಲಿ ಸೈಬರ್ ತಂತ್ರಜ್ಞರು, ಕಾನೂನು ಪಂಡಿತರು ಹಾಗೂ ಕೆಲವೊಂದು ಸಂಸ್ಥೆಗಳು ಒಳಗೊಂಡು ಕಾರ್ಯ ನಿರ್ವಹಿಸುತ್ತಿದೆ.

ಇಸ್ರೇಲ್ ಸರ್ಕಾರವು ಬೆನ್–ಗುರಿಯಾನ್ ವಿಶ್ವವಿದ್ಯಾಲಯದ ನೆರವು ಪಡೆದು ಕೃತಕ ಬುದ್ಧಿಮತ್ತೆ ಬಳಸಿ ಬಿಗ್ ಡಾಟಾ ಅಭಿವೃದ್ಧಿಪಡಿಸುತ್ತಿದೆ. ಇದರ ಮೂಲಕ ದಾಖಲಾದ ಸೈಬರ್ ಅಪರಾಧಗಳನ್ನು ವಿಸ್ತಾರವಾಗಿ ವಿವರಿಸಿ ತರಬೇತುಗೊಳಿಸಲಾಗುತ್ತಿದೆ. ಅದರ ಮೂಲಕ ಸೈಬರ್ ತನಿಖೆ ಸರಳಗೊಳಸುವ ಪ್ರಯತ್ನ ಮಾಡಿದೆ.

- **ಕ್ಯೂಆರ್ ಕೋಡ್ ಸ್ಕ್ಯಾನ್:** ಆನ್‌ಲೈನ್ ಮೂಲಕ ವಸ್ತುಗಳ ಮಾರಾಟ ಅಥವಾ ಮಾಹಿತಿ ಬೇಕಿದ್ದಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಎಂದೆನ್ನುವ ಸೈಬರ್ ಕಳ್ಳರು, ಮಾರಾಟ ಅಥವಾ ಖರೀದಿದಾರರ ರೂಪದಲ್ಲಿ ಗ್ರಾಹಕರ ಬ್ಯಾಂಕ್ ಖಾತೆಗೆ ಕನ್ನ ಹಾಕುತ್ತಾರೆ.
- **ಬಹುಮಾನ ಅಥವಾ ಲಾಟರಿ ಆಮಿಷ:** ನಿಮಗೆ ಬಹುಮಾನ, ಇಲ್ಲವೇ ಉಡುಗೊರೆ ಲಭಿಸಿದೆ ಎಂತಲೋ ಅಥವಾ ಭಾರೀ ಮೊತ್ತದ ಲಾಟರಿ ಲಕ್ಕಿ ಡ್ರಾದಲ್ಲಿ ದೊರೆತಿದೆ ಎಂದೋ ಆಮಿಷ ಒಡ್ಡುವವರಿದ್ದಾರೆ. ಉಡುಗೊರೆ ಅಥವಾ ಲಾಟರಿ ಹಣ ಪಡೆಯಲು ಶುಲ್ಕ ಹಾಗೂ ತೆರಿಗೆ ಕಟ್ಟಲು ಹೇಳುತ್ತಾರೆ. ಹಣ ಜಮೆ ಆದ ನಂತರ ನಾಪತ್ತೆಯಾಗುತ್ತಾರೆ. ಇನ್ನೂ ಕೆಲವೆಡೆ, ಪರಿಚಯಸ್ಥರ ಹೆಸರು ಹೇಳಿಕೊಂಡು ಉಡುಗೊರೆ ಕಳುಹಿಸುವ ನೆಪದಲ್ಲಿ ಶುಲ್ಕ ಪಡೆದು ವಂಚಿಸುತ್ತಾರೆ.
- **ನಕಲಿ ಖಾತೆಗಳ ಹಾವಳಿ:** ಫೇಸ್‌ಬುಕ್ ಹಾಗೂ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆಗಳನ್ನು ತೆರೆಯುವ ವಂಚಕರು, ಆ ಖಾತೆಗಳ ಮೂಲಕ ಜನರನ್ನು ಸಂಪರ್ಕಿಸಿ ವಂಚಿಸುತ್ತಿದ್ದಾರೆ. ಬೇರೊಬ್ಬರ ಹೆಸರಿನಲ್ಲಿ ಖಾತೆ ತೆರೆದು, ಅವರ ಸ್ನೇಹಿತರು ಹಾಗೂ ಸಂಬಂಧಿಕರಿಗೆ ಸಂದೇಶ ಕಳುಹಿಸಿ ಹಣ ಪಡೆಯುವ ದೂರುಗಳೂ ದಾಖಲಾಗಿವೆ.
- **ಬ್ಯಾಂಕಿಂಗ್ ವಂಚನೆ:** ಬ್ಯಾಂಕ್ ಪ್ರತಿನಿಧಿಗಳ ಸೋಗಿನಲ್ಲಿ ಕರೆ ಮಾಡುವ ಸೈಬರ್ ಕಳ್ಳರು, ಗ್ರಾಹಕರ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ನಿಷ್ಕ್ರಿಯಗೊಂಡಿದ್ದು, ಅದನ್ನು ಆಕ್ಟಿವೇಟ್ ಮಾಡಲು ಕಾರ್ಡ್ ಸಂಖ್ಯೆ ಮತ್ತು ಪಿನ್ ಕೇಳುತ್ತಾರೆ. ನಮ್ಮ ಮೊಬೈಲ್ ಸಂಖ್ಯೆಗೆ ಬರುವ ಒಟಿಪಿ ಹಂಚಿಕೊಳ್ಳುವಂತೆ ಹೇಳಿ ಹಣ ಲಪಟಾಯಿಸುತ್ತಾರೆ. ಹೀಗೆ ವಂಚನೆಗೊಳಗಾದವರಲ್ಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಶಿಕ್ಷಕರೂ ಬಹಳಷ್ಟು ಮಂದಿ ಇದ್ದಾರೆ. ಬ್ಯಾಂಕ್‌ಗಳು ಈ ಕುರಿತು ಸಾಕಷ್ಟು ಜಾಗೃತಿ ಮೂಡಿಸಿದರೂ, ವಂಚಕರ ಜಾಲಕ್ಕೆ ಬೀಳುವವರ ಸಂಖ್ಯೆಯೇನೂ ಕಡಿಮೆಯಾಗಿಲ್ಲ.
- **ವಿವಾಹಾಕಾಂಕ್ಷಿಗಳ ತಾಣ:** ವಿವಾಹಾಕಾಂಕ್ಷಿಗಳ ಡಿಜಿಟಲ್ ವೇದಿಕೆಯೂ ವಂಚಕರ ಕರಾಳಹಸ್ತಗಳಿಂದ ಮುಕ್ತವಾಗಿಲ್ಲ. ಮ್ಯಾಟ್ರಿಮೊನಿ ಜಾಲತಾಣಗಳ ಮೂಲಕ ಯುವಕ ಅಥವಾ ಯುವತಿಯರ ಪರಿಚಯ ಮಾಡಿಕೊಂಡು ವಂಚಿಸುವುದನ್ನೇ ಕೆಲವರು ತಮ್ಮ ಗಳಿಕೆಯ ಮೂಲವನ್ನಾಗಿಸಿಕೊಂಡಿದ್ದಾರೆ. ನಕಲಿ ಖಾತೆ ಮೂಲಕ ಯಾರದ್ದೋ ಭಾವಚಿತ್ರ ಹಾಗೂ ಮಾಹಿತಿ ಹಾಕಿ ಮದುವೆ ಆಗುವುದಾಗಿ ನಂಬಿಸಿ ಲಕ್ಷಾಂತರ ಹಣ ದೋಚುತ್ತಿದ್ದಾರೆ.
- **ಉದ್ಯೋಗ ಆಮಿಷ:** ಉದ್ಯೋಗಕ್ಕಾಗಿ ಹುಡುಕಾಟ ನಡೆಸುವ ಯುವಕರು, ನೌಕರಿ ಸೇರಿ ಹಲವು

